## ವಿದೇಶಗಳಲ್ಲೂ ಕಲೆ...

ಅಮೆರಿಕ ಹಾಗೂ ಲಂಡನ್‌ಗಳಲ್ಲಿ ಕರಕುಶಲ ತರಗತಿಗಳನ್ನು ನಡೆಸಿ ಹಲವಾರು ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದಾರೆ. ಹೀಗೆ ಒಮ್ಮೆ ಚಿಕಾಗೊ ವಿಮಾನ ನಿಲ್ದಾಣದಲ್ಲಿ ಸ್ವೆಟರ್ ಹೆಣೆಯುತ್ತಿದ್ದಾಗ ಪರಿಚಿತರಾದ ವಿದೇಶಿ ಮಹಿಳೆಯೊಬ್ಬರು ಇವರ ಕಲೆಯಿಂದ ಪ್ರಭಾವಿತರಾಗಿ ಸ್ನೇಹಿತೆಯಾಗಿ ಇವರಿಂದ ಹಲವು ಕಲೆಗಳನ್ನು ಕಲಿತದ್ದು ವಿಶೇಷ. ಈಗಲೂ ಆಕೆ ಭಾರತಕ್ಕೆ ಬಂದಾಗ ಇವರನ್ನು ಭೇಟಿ ಮಾಡದೆ ಹಿಂತಿರುಗಲಾರರಂತೆ!

ಒಮ್ಮೆ ಆತ್ಮೀಯ ಗೆಳತಿ ಶಶಿ ತಾವು ಹೋಗುತ್ತಿದ್ದ ಜೈನ್ ಮಹಾಸಭೆಗೆ ಕರೆದುಕೊಂಡು ಹೋಗಿ ಕಾಂಪಿಟೇಷನ್ ಒಂದರಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ಆಗ ಬಂದ ಬಹುಮಾನ ಇವರನ್ನು ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಸ್ಫೂರ್ತಿ ನೀಡಿತು, ಬಹುಮಾನಗಳನ್ನು ಗೆಲ್ಲುವಂತೆ ಮಾಡಿತು. ಕೆಲವು ಸ್ತ್ರೀ ಸಮಾಜದಿಂದ ಸನ್ಮಾನವೂ ಇವರಿಗೆ ಸಂದಿದೆ.

ಇವರ ಈ ಸೃಜನಶೀಲ ಕಲೆಗೆ ಪತಿ ಮಲ್ಲಿಕಾರ್ಜುನ್ ಅವರ ಸಂಪೂರ್ಣ ಸಹಕಾರವಿದೆ. ಟ್ರೆಕ್ಕಿಂಗ್‌ನಲ್ಲಿ ವಿಶೇಷ ಆಸಕ್ತರಾದ ಇವರ ಪತಿ ಹಿಮಾಲಯ ಸೇರಿದಂತೆ ಅನೇಕ ಕಡೆ ಚಾರಣ ಕೈಗೊಂಡಿದ್ದಾರೆ. ಮಗ ಸಂತೋಷ್ ಅಮೆರಿಕದಲ್ಲಿ ವೈದ್ಯ ಹಾಗೂ ಸೊಸೆ ಪೂರ್ಣಿಮಾ ಬ್ಯಾಂಕಿಂಗ್ ಉದ್ಯೋಗಿ. ಹೀಗೆ ಇಡೀ ಕುಟುಂಬ ಒಂದು ರೀತಿಯ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದೆ.



ಈ ರೀತಿ ಮಾಡುವುದರಿಂದ ವಾಸನೆ ಬರುವುದಿಲ್ಲ, ಕ್ರಿಮಿಕೀಟಗಳ ಕಾಟವಿರಲ್ಲ. ನಂತರ ಚಿತ್ರ ಬಿಡಿಸಿ ಅದಕ್ಕೊಂದು ಅಲಂಕಾರ ಮಾಡುತ್ತಾರೆ. ಇದರ ಮೇಲೆ ಕಾರ್ವಿಂಗ್ ಅತೀ ಸೂಕ್ಷ್ಮ ಕೆಲಸವಿದು. ಮನಸಿನ ಏಕಾಗ್ರತೆ ಬಹಳ ಮುಖ್ಯವಿಲ್ಲಿ. ಏಕಾಗ್ರತೆಯ ಪರೀಕ್ಷೆಯೆಂದರೂ ತಪ್ಪಾಗಲಾರದು. ಮತ್ತೊಂದು ಪ್ರಕಾರವೆಂದರೆ ಮೊಟ್ಟೆಯನ್ನು ಒಡೆದು ಅದರ ಸಣ್ಣ ಸಣ್ಣ ತುಂಡುಗಳನ್ನು ಮಾರ್ಡನ್ ಆರ್ಟ್ ರೂಪಕ್ಕಿಳಿಸಿ ಅದಕ್ಕೊಂದು ಕಲಾರೂಪವನ್ನು ಕೊಡುವ ಕೌಶಲ್ಯವಂತೂ ಕಣ್ಣಿಗಾನಂದ ನೀಡುತ್ತದೆ. ಚಂಡೀಗಡದಲ್ಲಿನ ರಾಕ್ ಗಾರ್ಡನ್‌ನಲ್ಲಿನ ಬೊಂಬೆಗಳನ್ನು ನೆನಪಿಸುತ್ತದೆ!

ಗ್ರೀಟಿಂಗ್ ಕಾರ್ಡ್ ವಿನ್ಯಾಸಗಳಂತೂ ಅದ್ಭುತ. (ಸೊಸೆಯ ಸೀಮಂತವನ್ನು ಲಂಡನ್ನಿನಲ್ಲಿ ವಿಜೃಂಭಣೆಯಿಂದ ಮಾಡಿದಾಗ ಬಂದವರಿಗೆ ಅರಿಶಿನ ಕುಂಕುಮದೊಟ್ಟಿಗೆ ಇವರು ಮಾಡಿದ ಗ್ರೀಟಿಂಗ್ ಕಾರ್ಡ್‌ನ ವಿನೂತನ ವಿನ್ಯಾಸಗಳೊಟ್ಟಿಗೆ ವಿಶೇಷವಾಗಿ ನೀಡಿದಾಗ ಅಲ್ಲಿದ್ದ ಸ್ನೇಹ ಬಳಗ ಇವರಿಗೆ ಫಿದಾ ಆದದ್ದೇ!) ಟ್ಯಾಟೂ, ಬಾಟಿಕ್, ಕೇಶವಿನ್ಯಾಸ, ಸೀರೆ ಕುಚ್ಚು, ಕುಂದನ್, ದಾರದ ಚೆಂಡು, ಮೈಸೂರು ಆರ್ಟ್, ವುಲ್ಲನ್ ವರ್ಕ್, ಪ್ಲೈವುಡ್, ಹಳೆಯ ರೇಷ್ಮೆ ಸೀರೆಗೆ ಕಸೂತಿ. ಅಬ್ಬ ಒಂದೇ ಎರಡೇ!

ನಾನಾ ತರನಾದ ಕಲೆಗಳು. ಅಲಂಕೃತಗೊಂಡ ಆ ಸೀರೆ ಹೊಸದರಂತೆ ನಳನಳಿಸುತಿತ್ತು. ಮೊಟ್ಟೆಯನ್ನು ಒಡೆದು ಸಣ್ಣ ಸಣ್ಣ ತುಂಡುಗಳಿಂದ ಬಿಡಿಸಿದ ಚಿತ್ರಗಳಂತೂ ಕಣ್ಮನ ಸೆಳೆಯಿತು. ಸೂಕ್ಷ್ಮ ಕಲೆಯಲ್ಲಿ ಇವರಂತೂ ನಿಜವಾದ ಸಾಧನೆ ಮಾಡಿದವರೆಂದರೆ ತಪ್ಪಾಗಲಾರದು. ಒಟ್ಟಿನಲ್ಲಿ ಇವರ ಕೈಯಲ್ಲಿ ಹೊರಬಂದ ಪ್ರತಿ ಕಲೆಯೂ ನಳನಳಿಸುತ್ತದೆ. ಪ್ರತಿ ಚಿತ್ರವೂ ಮಾತನಾಡುತ್ತಿದೆ, ಕಲೆಯು ಸಂತಸಪಡುತ್ತಿದೆ.

ಸುಧಾ ಸಂಗೀತದಲ್ಲೂ ಪರಿಣಿತರು. ಸಂಗೀತ, ವೀಣೆಯನ್ನು ವೀಣಾ ರೇವತಿಯವರಲ್ಲಿಯೂ, ಕೀಬೋರ್ಡ್ ಅನ್ನು ಅರುಣ್ ಅವರಲ್ಲಿಯೂ ಹಾಗೂ ಕೊಳಲನ್ನು ಪ್ರಸನ್ನ ಅವರರಿಂದಲೂ ಕಲಿತು ಸಂಗೀತದಲ್ಲಿಯೂ ತಮ್ಮ ಪ್ರತಿಭೆಯನ್ನು ಮೆರೆಯುತ್ತಿದ್ದಾರೆ.

### ಪೇಂಟಿಂಗ್- ಎಂಬೋಸ್ ವರ್ಕ್

ಪೇಂಟಿಂಗ್‌ನಲ್ಲಿ ಅಪಾರ ಆಸಕ್ತಿಯಿರುವ ಸುಧಾ, ತಂಜಾವೂರ್ ಪೈಂಟಿಂಗ್, ಬಟ್ಟೆ ಮೇಲೆ ಎಂಬೋಸ್ ವರ್ಕ್‌ನಲ್ಲೂ ಪಳಗಿದವರು.

ಪೇಂಟಿಂಗ್‌ನ ಪ್ರಕಾರಗಳಾದ ತಂಜಾವೂರು, ಆಯಿಲ್ ಪೇಂಟಿಂಗ್, ಒನ್ ಸ್ಟ್ರೋಕ್ ಪೇಂಟ್, ರವಿವರ್ಮ ಆರ್ಟ್, ಕೇರಳ ಮ್ಯೂರಲ್‌ಗಳಂತಹುದರಲ್ಲಿ ಪರಿಣಿತರು. ಸೀರೆ ಚೂಡಿದಾರ್ ಲೆಹಂಗಾಗಳಿಗೆ ಕುಂದನ್ ವರ್ಕ್ ಅನ್ನು ವಿನೂತನ ಶೈಲಿಯಲ್ಲಿ ನೀಡಿರುತ್ತಾರೆ.

'ತಂಜಾವೂರ್ ಪೈಂಟ್ಸ್ (ವಾಟರ್ ಪ್ರೂಫ್



ಸುಧಾ

6 ಎಂಎಂ ಕಾರ್ಡ್ ಬೋರ್ಡ್) ಲೈನಿಂಗ್ ಕ್ಲಾತ್‌ನ ಈ ಬೋರ್ಡ್ ಮೇಲೆ ಅಂಟಿಸಿ ಸುಕ್ಕು ಇಲ್ಲದಂತೆ ಟೈಟಾಗಿ ಎಳೆದು ಅಂಟಿಸಬೇಕು. ಇದಕ್ಕಾಗಿ ಹುಣಿಸೆ ಬೀಜದ ಪೌಡರ್‌ನಿಂದ ಗಂಜಿ ಮಾಡಿಕೊಳ್ಳಬೇಕು. ಚಾಕ್ ಪೌಡರ್, ಗಂಜಿ ಹಾಗೂ ನೀರಿನಿಂದ ಪೇಸ್ಟ್ ಮಾಡಿಕೊಂಡು ಅದನ್ನ ಶೋಧಿಸಿ ಬೋರ್ಡ್ ಒಣಗಿದ ಮೇಲೆ ಇದನ್ನು ಅಪ್ಲೈ ಮಾಡಬೇಕು. ಮೇಲೆ ಕೆಳಗೆ ಅಡ್ಡಡ್ಡ ಉದ್ದು 2 ರಿಂದ 3 ಕೋಟ್ ಒಂದೊಂದು ಬಾರಿಗೂ ಒಣಗಿಸಿ ಅಪ್ಲೈ ಮಾಡಬೇಕು. ನೀರನ್ನು ಬೋರ್ಡ್ ಮೇಲೆ ಚಿಮುಕಿಸಿ ರಬ್ ಮಾಡ್ತಾ ಇದ್ರೆ ಚೆನ್ನಾಗಿ ಬರುತ್ತದೆ, ಒಣಗಿದ ಮೇಲೆ, ಚಿತ್ರವನ್ನು ಟ್ರೇಸ್ ಮಾಡಬೇಕು. ಒಡವೆಗಳನ್ನು ಮಾತ್ರ ಎಂಬೋಸ್ ಮಾಡಬಹುದು, ಬರೆದು ಆರ್ಟ್ ಮಾಡಿದ ನಂತರವೇ ಎಂಬೋಸ್ ಮಾಡಬಹುದು. ಅರೇಬಿಕ್ ಗಮ್ ರಾತ್ರಿಯಿಡೀ ನೆನೆಸಿ ಇಡಬೇಕು. ಬೆಳಿಗ್ಗೆ ಶೋಧಿಸಿ, ಸಮಪ್ರಮಾಣದಲ್ಲಿ ನಂತರ ಚಾಕ್ ಪೌಡರ್‌ನೊಂದಿಗೆ ಬೆರೆಸಿ ಶೋಧಿಸಿ ಅದನ್ನು ಲೈನಿಂಗ್ ಕ್ಲಾತ್‌ಗೆ ಹಾಕಬೇಕು. ಇದರಿಂದ ಎಂಬೋಸ್ ವರ್ಕ್ ಚೆನ್ನಾಗಿ ಕಾಣುತ್ತದೆ' ಎನ್ನುತ್ತಾರೆ ಸುಧಾ.

### ದಾರದ ಚೆಂಡು

ಬಲೂನನ್ನು ಊದಿ ಅದಕ್ಕೆ ಫೆವಿಕಾಲ್ ಹಚ್ಚಿ ಬಣ್ಣ ಬಣ್ಣದ ದಾರದಿಂದ ಬೇಕಾದ ಆಕೃತಿಗೆ ಸುತ್ತಿ ಒಣಗಿದ ನಂತರ ಸೂಜಿಯ ಸಹಾಯದಿಂದ ಬಲೂನನ್ನು ಒಡೆದರೆ ಸುಂದರ ಕಲಾಕೃತಿ ಮೂಡುತ್ತದೆ. ಅವುಗಳಲ್ಲಿ ಚಾಕೊಲೇಟ್, ರಬ್ಬರ್, ಪೆನ್ಸಿಲ್.. ಹೀಗೇ ಇಟ್ಟಾಗ ಮನೆಗೆ ಬಂದ ಮಕ್ಕಳಾದಿಯಾಗಿ ಎಲ್ಲರನ್ನೂ ಆಕರ್ಷಿಸುತ್ತದೆ. ■